CW.5 PW.3

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.1175/2020

| | |
|---|---|
| ಸಾಕ್ಷಿದಾರರ ಹೆಸರು | ಶ್ರೀಕಾಂತ್ |
| ತಂದೆಯ ಹೆಸರು | ಶಾಂತಪ್ಪ |
| ವಯಸ್ಸು | 29 ವರ್ಷ |
| ವೃತ್ತಿ | ಪಿಸಿ ನಂ.179 ಕನಕಪುರ ಸಂಚಾರಿ ಪೋಲೀಸ್ |
| ವಿಳಾಸ | ಕನಕಪುರ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 11.06.2025 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ನಾನು ಕೋಡಿಹಳ್ಳಿ ಪೋಲೀಸ್ ಠಾಣೆಯಲ್ಲಿ 2018 ರಿಂದ 2024 ರವರೆಗೂ ಪೋಲೀಸ್ ಕಾನ್ಸಟೇಬಲ್ ಆಗಿ ನನ್ನ ಕರ್ತವ್ಯವನ್ನು ನಿರ್ವಹಿಸಿದ್ದೇನೆ.

ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯನ್ನು ನಾನು ನಮ್ಮ ಮೇಲಾಧಿಕಾರಿಯ ಜೊತೆ ಪ್ರಸ್ತುತ ಪ್ರಕರಣದಲ್ಲಿ ದಾಳಿ ಮಾಡಲು ಹೋದಾಗ ನೋಡಿರುತ್ತೇನೆ. ಸಾಕ್ಷಿಯು ದಾಳಿ ಮಾಡಿದ ಸಂದರ್ಭದಲ್ಲಿ ತಯಾರು ಮಾಡಿದ ಮಹಜರ್ ವರದಿಗೆ ತಾನು ಸಹಿ ಮಾಡಿರುವುದಾಗಿ ನುಡಿದಿದ್ದು, ಸಾಕ್ಷಿಗೆ ಸದರಿ ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು

ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ಈಗ ನಿಪಿ-1(ಸಿ) ಎಂದು ಗುರುತಿಸಲಾಯಿತು.

ದಿನಾಂಕ 31.03.2020 ರಂದು ಸಂಜೆ 6 ಗಂಟೆಯಿಂದ 7ಗಂಟೆಯವರೆಗೂ ತಗಡೇಗೌಡನದೊಡ್ಡಿ ಗ್ರಾಮದ ಕೃಷ್ಣ ಅಂಗಡಿಯ ಬಳಿ ಮಹಜರ್ ಮಾಡಲಾಗಿ ಚಾಸಾ-1 ರವರ ಸಮಕ್ಷಮದಲ್ಲಿ ನಾನು ಹಾಗೂ ಚಾಸಾ-4, ಚಾಸಾ-6 ಮತ್ತು ಪಂಚ ಸಾಕ್ಷಿಗಳ ಸಮಕ್ಷಮದಲ್ಲಿ ತಯಾರು ಮಾಡಲಾಗಿರುತ್ತದೆ.

ಚಾಸಾ-1 ರವರ ಜೊತೆ ನಾವು ಸಿಬ್ಬಂದಿಯವರು ಸ್ಥಳಕ್ಕೆ ದಾಳಿ ಮಾಡಿದಾಗ ಆರೋಪಿಯು ಮದ್ಯ ಮಾರಾಟ ಮಾಡುತ್ತಿದ್ದು ಸ್ಥಳದಲ್ಲಿ 90 ಎಂ ಎಲ್ ನ ಹೈವಾರ್ಡ ಚಿಯರ್ಸ ವಿಸ್ಕಿ 86 ಪ್ಯಾಕೇಟುಗಳು ದೊರೆತಿದ್ದು ಅದೇ ರೀತಿ 43 ಬ್ಲಾಕ್ ಪೇಪರ್ 180 ಎಂ ಎಲ್ ಪ್ಯಾಕ್ ಗಳು ದೊರೆದವು. ಸದರಿ ಹೈವಾರ್ಡ ಚಿಯರ್ಸ ವಿಸ್ಕಿ ಪ್ಯಾಕೇಟ್ ಗಳಲ್ಲಿ ಒಂದನ್ನು ಹಾಗೂ ಬ್ಲಾಕ್ ಪೇಪರ್ ಪ್ಯಾಕೇಟ್ ಗಳಲ್ಲಿ ಒಂದನ್ನು ಚಾಸಾ-1 ರವರು ಪರೀಕ್ಷೆಯ ಸಲುವಾಗಿ ಬಿಳಿ ಬಟ್ಟೆಯಲ್ಲಿ ಅದನ್ನು ಸೀಲ್ ಮಾಡಿ 'ಕೆ' ಎಂಬ ಅಕ್ಷರದಲ್ಲಿ ಗುರುತನ್ನು ಮಾಡಿದರು. ನಂತರ ಸದರಿ ಮದ್ಯದ ಪ್ಯಾಕೇಟ್ ಗಳನ್ನು ಅಮಾನತು ಪಡಿಸಿಕೊಂಡು ಮಹಜರ್ ಪ್ರಕ್ರಿಯೆ ಮುಗಿದ ಮೇಲೆ ಮುಂದಿನ ಕ್ರಮಕ್ಕಾಗಿ ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ. ಈ ಸಂಬಂಧ ನಾನು ಠಾಣೆಯಲ್ಲಿ ಹೇಳಿಕೆಯನ್ನು ಕೊಟ್ಟಿರುತ್ತೇನೆ.

ಸಾಕ್ಷಿಗೆ ಸದರಿ ಪ್ರಕರಣದಲ್ಲಿ ಮುದ್ದೆಮಾಲುಗಳನ್ನು ತೋರಿಸಲಾಗಿ ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗ ಮು.ಮ-1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ**

ನಾನು ದಿನಾಂಕ 31.03.2020 ರಂದು ಠಾಣೆಯಲ್ಲಿ ಇದ್ದೆನು. ನಾನು ಡೇ ಡ್ಯೂಟಿಯಲ್ಲಿ ಇದ್ದೇನು. ನಾನು ಸದರಿ ದಿನ ಕರ್ತವ್ಯದಲ್ಲಿದ್ದ ಬಗ್ಗೆ ತೋರಿಸಲು ಹಾಜರಾತಿಯ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ನಾನು ಸದರಿ ದಿನ ರೌಂಡ್ಸ್ ಕರ್ತವ್ಯದಲ್ಲಿದ್ದು ಆದರೆ ಸದರಿ ಸಮಯದಲ್ಲಿ ಠಾಣೆಯಲ್ಲಿ ಹಾಜರಿದ್ದೇನು. ನಾನು ಹಾಗೂ ನಮ್ಮ ಠಾಣೆಯವರು 5.30 ಗಂಟೆ ಸಮಯದಲ್ಲಿ ನಮ್ಮ ಠಾಣಾ ಜೀಪಿನಲ್ಲಿ ಸ್ಥಳಕ್ಕೆ ಹೊರೆಟೆವು. ನನ್ನ ಜೊತೆ ಚಾಸಾ-1, ಚಾಸಾ-4, ಚಾಸಾ-6, ಚಾಸಾ-2 ಮತ್ತು ಚಾಸಾ-3 ರವರು ಅಂದರೆ ಪಂಚ ಸಾಕ್ಷಿಗಳು ಜೊತೆಯಲ್ಲಿ ಹೋಗಿರುತ್ತೇವೆ . ಘಟನಾ ಸ್ಥಳಕ್ಕೂ ನಮ್ಮ ಠಾಣೆಗೂ ಸುಮಾರು 15 ರಿಂದ 20 ಕಿಲೋ ಮೀಟರ್ ಅಂತರವಿರುತ್ತದೆ ಎಂದರೆ ಸಾಕ್ಷಿಯು 8 ರಿಂದ 9 ಕಿ.ಮೀಟರ್ ಅಂತರವಿರುತ್ತದೆ ಎಂದು ನುಡಿಯುತ್ತಾರೆ. ಚಾಸಾ-1 ರವರು ನಮಗೆ ಸದರಿ ಘಟನೆಯ ಬಗ್ಗೆ 5.30 ಗಂಟೆಗೆ ತಿಳಿಸಿರುತ್ತಾರೆ. ಘಟನಾ ಸ್ಥಳಕ್ಕೆ ಸಂಜೆ 6 ಗಂಟೆಗೆ ತಲುಪಿರುತ್ತೇವೆ.

ಸಾಮಾನ್ಯವಾಗಿ 10 ಕಿ.ಮೀಟರ್ ಅಂತರದ ಸ್ಥಳಕ್ಕೆ ಹೋಗಬೇಕಾಗಿದಾರೆ 10 ನಿಮಿಷ ಸಾಕು ಎಂದರೆ ಸಾಕ್ಷಿಯು 10 ರಿಂದ 15 ನಿಮಿಷ ಬೇಕಾಗುತ್ತದೆ ಎಂದು ನುಡಿಯುತ್ತಾರೆ. ತಗಡೇಗೌಡನದೊಡ್ಡಿ ಒಂದು ಚಿಕ್ಕ ಗ್ರಾಮ ಎಂದರೆ ಸರಿ. ಅಲ್ಲಿ ಸರಿ ಸುಮಾರು 10 ರಿಂದ 15 ಮನೆಗಳು ಇವೆ ಎಂದರೆ ಸರಿಯಲ್ಲ. ಇನ್ನು ಜಾಸ್ತಿ ಇವೆ ಎಂದು ನುಡಿಯುತ್ತಾರೆ. ಸದರಿ ಮದ್ಯದ ಪ್ಯಾಕೇಟ್ ಗಳನ್ನು ಅಮಾನತು ಪಡಿಸಿಕೊಂಡ ಸ್ಥಳದ ಚಕ್ಕುಬಂದಿ ಗೊತ್ತಿರುತ್ತದೆ. ಪೂರ್ವಕ್ಕೆ ಕುಮಾರ್ ರವರ ಮನೆ, ಪಶ್ಚಿಮಕ್ಕೆ ರಾಜಚಾರ್ ರವರ ಮನೆ, ಉತ್ತರಕ್ಕೆ ಕುಮಾರ್ ರವರ ಮನೆ

ಹಾಗೂ ದಕ್ಷಿಣಕ್ಕೆ ಕೋಡಿಹಳ್ಳಿ ಅರೆಕೊಪ್ಪ ರಸ್ತೆ ಇರುತ್ತದೆ. ಮಹಜರ್ ನ್ನು ನಾನೇ ಬರೆದಿರುತ್ತೇನೆ. ಸದರಿ ಸ್ಥಳದ ಅಂಗಡಿಯ ಮುಂದೆ ಬರೆದಿರುತ್ತೇನೆ.

ಕೇವಲ ಮೇಲಾಧಿಕಾರಿಗಳ ಮಾತನ್ನು ಕೇಳಿ ನಾನು ಯಾವುದೇ ಸ್ಥಳಕ್ಕೆ ಹೋಗದೇ ಇದ್ದರೂ ಸಹಿತ ಠಾಣೆಯಲ್ಲಿ ಕುಳಿತು ಸದರಿ ಮಹಜರ್ ನ್ನು ಬರೆದು ಸಹಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಕೇವಲ ಅಂಕಿಅಂಶದ ಸಲುವಾಗಿ ಸದರಿ ಪ್ರಕರಣ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**